ಶ್ರೀ ಬಿ ಜಿ. ಜವಳಿ.—ಅಧ್ಯಕ್ಷರೇ, ೧೯೮೩–೮೪ರಿಂದ ೧೯೮೫–೮೬ರ ವರೆಗೆ ಮಂಜೂರು ವರ್ಷ ಗಳ ಚಿತ್ರವನ್ನು ಇಲ್ಲಿ ಕೊಟ್ಟಿದ್ದಾರೆ. ಆದರೆ ನಾನು ಕೇಳಿದ ಪ್ರಶ್ನೆ, ಎಂದರೆ, ಅಭಿವೃದ್ಧಿ ನಿಗಮಕ್ಕೆ ಬಂದ ಅರ್ಜಿಗಳು ಎಷ್ಟು? ಹಾಗೂ ಫಲಾನುಭವಿಗಳು ಎಷ್ಟು ಎಂದು, ಉದಾಹರಣೆಗೆ ಬಿಜಾಪುರದಲ್ಲಿ ೧೯೮೩–೮೪ರಲ್ಲಿ ೯೪೦ ಅರ್ಜಿಗಳು ಬಂದಿದ್ದು ೪೧೦ ಜನರಿಗೆ ಮಾತ್ರ ಕೊಟ್ಟಿದ್ದಾರೆ. ಅವರಿಗೆ ಬೀಜಧನ ಕೊಡುವುದಕ್ಕೆ ಆಗಲಿಲ್ಲವೇ? ಈ ರೀತಿ ಪ್ರತಿ ಜಿಲ್ಲೆಯಲ್ಲಿ ವ್ಯತ್ಯಾಸ ಇದೆ. ಷೆಡ್ಯೂಲ್ ಬ್ಯಾಂಕ್‌ಗಳ ಮುಖಾಂತರ ಕೆಲವರು ಅರ್ಜಿ ಹಾಕಿದ್ದಾರೆ. ಅವರಿಗೂ ನೀವು ಸಹಾಯವನ್ನು ಕೊಡುತ್ತೀರಾ? ಬರೀ ಅಭಿವೃದ್ಧಿ ನಿಗಮದಲ್ಲಿ ಅರ್ಜಿ ಕೊಟ್ಟವರಿಗೆ ಮಾತ್ರ ಸಹಾಯ ಮಾಡಲಾಗುತ್ತದೆಯೇ? ಹಾಗೂ ಬ್ಯಾಂಕ್ ಮುಖಾಂತರವೇ ರಾಜ್ಯದಲ್ಲಿ ಸಬ್ಸಿಡಿ ಕೊಡಬೇಕು ಎಂದು ಸರ್ಕಾರ ಉದ್ದೇಶಿಸಿರುವುದು ನಿಜವೇ?

ಶ್ರೀ ಜಿ. ಬಸವಣ್ಣಪ್ಪ.—ಈ ನಿಗಮಕ್ಕೆ ಬಂದ ಅಷ್ಟೂ ಅರ್ಜಿಗಳಿಗೆ ಮಂಜೂರಾತಿ ಕೊಡುವುದ ಕ್ಕಾಗುವುದಿಲ್ಲ. ಬಿಜಾಪುರದಲ್ಲಿ ೧೯೮೩–೮೪ರಲ್ಲಿ ೯೪೦ ಅರ್ಜಿಗಳು ಬಂದಿದ್ದು, ೪೧೦ಕ್ಕೆ ಮಂಜೂರಾತಿ ಕೊಟ್ಟಿದ್ದೇವೆ. ಹಾಗೇ ಮುಂದಿನ ವರ್ಷಗಳ ವಿವರವನ್ನು ಕೊಟ್ಟಿದ್ದೇನೆ. ಕೆಲವು ಅರ್ಜಿಗಳಿಗೆ ಮಂಜೂರಾತಿ ಮಾಡಿಲ್ಲದ್ದಕ್ಕೆ ಕಾರಣ, ಕೆಲವು ಅರ್ಜಿದಾರರು ಇನ್ನಿತರೇ ಸಹಕಾರಿ ಸಂಘ ಸಂಸ್ಥೆಗಳಿಂದ ಹಣ ತೆಗೆದುಕೊಂಡಿರುತ್ತಾರೆ. ಅದನ್ನು ನೋಡಿ ಅರ್ಜಿ ತಿರಸ್ಕಾರ ಮಾಡಿದ್ದೇವೆ. ಸಾಲ ಅಪೇಕ್ಷೆ ಮಾಡಿ ಬಂದವರಿಂ. ಯಾವುದೋ ಇಂಡಸ್ಟ್ರೀ ಹಾಕುತ್ತೇವೆಂದು ತಿಳಿಸಿರುತ್ತಾರೆ. ಆದರೆ ಅದರ ಕಚ್ಚಾ ಪದಾರ್ಥ ಅಲ್ಲಿ ಇರುವುದಿಲ್ಲ. ಇಂತಹವರಿಗೆ ಸಾಲ ಕೊಟ್ಟರೆ ಊರ್ಜಿತವಾಗುವುದಿಲ್ಲವೆಂದು ತಿರಸ್ಕರಿಸಲಾಗುತ್ತದೆ. ಕೆಲವರು ವರ್ಷದ ಕೊನೆಯಲ್ಲಿ ಅರ್ಜಿ ಹಾಕುತ್ತಾರೆ. ಆಗ ಅದನ್ನು ಪ್ರೊಸೆಸ್ ಮಾಡುವುದಕ್ಕಾಗುವುದಿಲ್ಲ. ಇನ್ನು ಎರಡನೆಯದಾಗಿ ನೇರವಾಗಿ ಬ್ಯಾಂಕಿಗೆ ಅರ್ಜಿ ಬಂದರೂ ಸಹಾ ಅದನ್ನು ನಿಗಮಕ್ಕೆ ತಿಳಿಸಿ ಅವರಿಗೂ ಸಹಾಯ ಕೊಡಲಾಗುತ್ತದೆ. ಅವರಿಗೂ ಬೀಜಧನವನ್ನು ಮಂಜೂರು ಮಾಡಲಾಗಿದೆ. ಸರ್ಕಾರಿ ಆಜ್ಞೆ ಪ್ರಕಾರ ೩೧–೧೧–೮೬ರಿಂದ ಬೀಜಧನ ಮತ್ತು ಸಹಾಯಧನವನ್ನು ಮಂಜೂರು ಮಾಡಲಾಗಿದೆ, ೨೫ ಪರ್ಸೆಂಟ್ ಬೀಜಧನ ೨೫ ಪರ್ಸೆಂಟ್ ಸಹಾಯಧನ ಹಾಗೂ ಉಳಿದ ೫೦ ಪರ್ಸೆಂಟನ್ನು ಬ್ಯಾಂಕ್‌ನಿಂದ ಸಾಲವಾಗಿ ಕೊಡತಕ್ಕ ವ್ಯವಸ್ಥೆಯಾಗಿದೆ

ಸಣ್ಣ ಗೇಣಿ ರೈತರಿಗಾಗಿ ಪರಿಹಾರ

೪೮೮ (೧) ಶ್ರೀ ಬಿ.ಧರ್ಮಪ್ಪ—ಮಾನ್ಯ ಕಂದಾಯ,ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರವು ಈಗಾಗಲೇ ಸಣ್ಣ ಗೇಣಿ ರೈತರಿಗೆ ಪರಿಹಾರ ರದ್ದು ಮಾಡಿದ್ದು ಅದು ಅನೇಕ ವಿವಾದಗಳಿಗೆ ಕಾರಣವಾಗಿರುವುದರಿಂದ ಎಲ್ಲಾ ರೈತರಿಗೂ ಒಂದೇ ಬಾರಿಗೆ ಪರಿಹಾರ ರದ್ದು ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಆ) ಈ ಪದ್ಧತಿಯನ್ನು ತೆಗೆದುಹಾಕಲು ತತ್ವಶಃ ಒಪ್ಪಿಕೊಂಡಿರುವಾಗ ಸಣ್ಣ ಮತ್ತು ದೊಡ್ಡ ಗೇಣಿ ರೈತ ಎಂಬ ತಾರತಮ್ಯಕ್ಕೆ ಕಾರಣವೇನು ?

ಇ) ಈ ರೀತಿ ಎಲ್ಲರಿಗೂ ಪರಿಹಾರ ರದ್ದು ಮಾಡುವುದರಿಂದ ನೂರಾರು ಮಂದಿ ರೈತರಿಗೆ ತೊಂದರೆಯಾಗುವುದನ್ನು ತಪ್ಪಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಎಸ್. ಆರ್.ಬೊಮ್ಮಾಯಿ (ಕಂದಾಯ,ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು).—

(ಅ) ೧೯೬೧ರ ಭೂಸುಧಾರಣಾ ಕಾನೂನನ್ನು ೧೯೮೬ರಲ್ಲಿ ತಿದ್ದುಪಡಿ ಮಾಡಿ ಸಣ್ಣ ಗೇಣಿ ರೈತರಿಗೆ ಈ ಸವಲತ್ತನ್ನು ಒದಗಿಸಿದೆ. ವಿವಾದಗಳು ಯಾವುದೂ ಸರ್ಕಾರದ ಗಮನಕ್ಕೆ ಬಂದಿಲ್ಲ. ಈ ಸವಲತ್ತನ್ನು ದೊಡ್ಡ ಗೇಣಿದಾರರಿಗೆ ಅನ್ವಯಿಸುವಂತೆ ಕಾನೂನು ತಿದ್ದುಪಡಿಯ ವಿಚಾರವಿಲ್ಲ.

(ಆ) ಸಶಕ್ತ ರೈತರು ಸರ್ಕಾರಕ್ಕೆ ಕೊಡಬೇಕಾದ ಪ್ರೀಮಿಯಂ ಹಣವನ್ನು ರದ್ದುಮಾಡುವ ಉದ್ದೇಶ ಸರ್ಕಾರಕ್ಕಿಲ್ಲ. ಆದುದರಿಂದ ಇಲ್ಲಿ ತಾರತಮ್ಯದ ಪ್ರಶ್ನೆಯೇ ಉದ್ಭವಿಸುವುದಿಲ್ಲ.

(ಇ) ಇಲ್ಲ.

ಶ್ರೀ ಬಿ. ಧರ್ಮಪ್ಪ.— ಈಗಾಗಲೇ ಭೂಸುಧಾರಣೆ ಕಾನೂನು ಪ್ರಕಾರ ತಿದ್ದುಪಡಿ ತಂದಿದ್ದರೂ ಸಣ್ಣ ಗೇಣಿ ರೈತರು ಯಾರು ಎಂದು ನಿಗದಿ ಮಾಡಲಾಗಿಲ್ಲ. ಇಂತಹವರು ಸಣ್ಣ ರೈತರು ಎಂದು ಗುರ್ತು ಮಾಡದೇ ಇದ್ದರೆ ಅವರಿಗೆ ಸವಲತ್ತು ಕೊಡಲು ಹೇಗೆ ಸಾಧ್ಯ ? ಈ ಬಗ್ಗೆ ಸರ್ಕಾರವೂ ಯಾವುದೇ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಸಣ್ಣ ಸಣ್ಣ ಗೇಣಿ ರೈತರು ಯಾರು ಎಂದು ಗೊತ್ತಾಗದೇ ಇರುವುದರಿಂದ ಯಾರೂ ಹಣವನ್ನು ಕಟ್ಟುತ್ತಾ ಇಲ್ಲ. ಅನೇಕರಿಗೆ ಬೇರೆ ಬೇರೆ ಭಾಗದಲ್ಲಿ ಬೇರೆ ಬೇರೆ ಜಮೀನು ಇದೆ. ಇವತ್ತು ಇದು ಇತ್ಯರ್ಥವಾಗದೇ ಇರುವುದರಿಂದ ಅವರಿಗೆ ಸರಿಯಾದ ತಿಳುವಳಿಕೆ ಕೊಡುವ ಸಲುವಾಗಿ ಸೂಕ್ತ ಕಾರ್ಯಕ್ರಮ ತೆಗೆದುಕೊಂಡು, ಸಣ್ಣ ಗೇಣಿ ರೈತರು ಯಾರೆಂದು ನಿಗಧಿ ಪಡಿಸಬೇಕು. ಸರಿಯಾದ ತಿಳುವಳಿಕೆ ಇಲ್ಲದೇ ಸೊಸೈಟಿ ಸಾಲವನ್ನೂ ಸಹಾ ಕಟ್ಟಿರುವುದಿಲ್ಲ. ಇದು ಒಬ್ಬೊಬ್ಬರಿಗೆ ಸಂಬಂಧ ಇಲ್ಲದ ರೀತಿಯಲ್ಲಿ ನಡೆಯುತ್ತಾ ಇದೆ. ಯಾವ ಯಾವ ರೈತರಿಗೆ ಸೌಲಭ್ಯ ಸಿಗುತ್ತದೆ ಎಂಬ ತಿಳುವಳಿಕೆ ಕೊಡಬೇಕು. ಇಂತಹ ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ತಿಳುವಳಿಕೆ ಕೊಡುವ ಬಗ್ಗೆ ಹೇಳಿದ್ದಾರೆ. ಈಗಾಗಲೇ ಹತ್ತು ಎಕರೆಗೆ ಸಮಾನವಾದಂಥ ನೀರಾವರಿ ಜಮೀನಿಗೆ ನಾವು ಭೂಸುಧಾರಣೆ ಕಾಯಿದೆ ಪ್ರಕಾರ ವಿನಾಯಿತಿಯನ್ನು ಕೊಟ್ಟಿದ್ದೇವೆ. ಹೆಚ್ಚಿನ ತಿಳುವಳಿಕೆ ಕೊಡಬೇಕೆಂದು ಮಾನ್ಯ ಸದಸ್ಯರು ಹೇಳುತ್ತಾರೆ. ಅದನ್ನು ಕೊಡುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಬಿ. ಧರ್ಮಪ್ಪ.—ಆ ಪ್ರಶ್ನೆಗೆ ಉತ್ತರ ಹೀಗಿದೆ. ನಾನು ಈಗಾಗಲೇ ಭೂಸುಧಾರಣೆಯಲ್ಲಿ ತಿದ್ದುಪಡಿಯನ್ನು ತಂದಿರುವುದು, ಊಳುವವನೇ ಹೊಲದ ಒಡೆಯ ಎಂದು ಏನು ಪರಿಹಾರ ಕೊಡುತ್ತಿದ್ದೀರಿ, ಅದು ನಮ್ಮ ಜಮೀನುಗಳನ್ನು ನಾವೇ ಖರೀದಿ ಮಾಡತಕ್ಕಂಥ ರೀತಿಯಲ್ಲಿದೆ. ಆದ್ದರಿಂದ ಇವತ್ತು ಭೂಸುಧಾರಣೆ ಎನ್ನುವುದು ಏನಿದೆ, ಯಾವುದೇ ಸುಧಾರಣೆ ಇದರಿಂದ ಆಗುವುದಿಲ್ಲ. ಅವರೇ ಅವರ ಜಮೀನಿಗೆ ಹಣ ಕೊಟ್ಟು ಕೊಳ್ಳುವುದರಿಂದ ಯಾವುದೇ ರೀತಿಯ ಪರಿಹಾರ ಇದರಿಂದ ದೊರೆತಿಲ್ಲ. ಆದ್ದರಿಂದ ತತ್ವಶಃ ಗೇಣಿದಾರ ಮತ್ತು ಜಮೀನ್ದಾರ ಪದ್ಧತಿಯನ್ನು ತೆಗೆಯಬೇಕಾದರೆ ಪೂರ್ತಿ ಪರಿಹಾರ ರದ್ದುಮಾಡಿದರೆ ಮಾತ್ರ ನಿಜವಾದ ಭೂಸುಧಾರಣೆ ಆಗುತ್ತದೆ. ಇಲ್ಲದಿದ್ದರೆ ಇದರಿಂದ ಭೂಸುಧಾರಣೆ ಆಗುವುದಕ್ಕೆ ಸಾಧ್ಯವಿಲ್ಲ. ಇದನ್ನು ತತ್ವಶಃ ಒಪ್ಪಿಕೊಂಡಿರುವುದರಿಂದ ಎಲ್ಲರಿಗೂ ಪರಿಹಾರ ರದ್ದು ಮಾಡುವುದರಿಂದ ಮಾತ್ರ ಇದು ಸಾಧ್ಯ, ಇಲ್ಲದಿದ್ದರೆ ನಮ್ಮ ಜಮೀನಿಗೆ ನಾವೇ ಪರಿಹಾರ ಕೊಟ್ಟು ಹೊಸದಾಗಿ ನಾವೇ ಕೊಳ್ಳುವುದರಿಂದ ಭೂಸುಧಾರಣೆಯ ನಿಜವಾದ ಅರ್ಥವಾಗುವುದಿಲ್ಲ. ಇದನ್ನು ಸಣ್ಣ ರೈತ ದೊಡ್ಡ ರೈತ ಎಂದು ತಾರತಮ್ಯ ಮಾಡುವುದು ಬೇಡ. ಎಲ್ಲರಿಗೂ ಇದು ಮಾಫಿ ಆಗಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಶ್ರೀ ಧರ್ಮಪ್ಪನವರು ಸಿದ್ಧಾಂತವನ್ನು ಹೇಳುತ್ತಿದ್ದಾರೆ. ಅವರು ಹೇಳುವುದು ಸರಿ. ಆದರೆ ಸರ್ಕಾರ ಭೂ ಒಡೆಯರಿಗೆ ಹಣ ಕೊಡುವ ಅವಶ್ಯಕತೆ ಇದೆ. ಇದು ಕಾನೂನು ಪ್ರಕಾರ ನಿಗದಿಮಾಡಿರುವುದು ಕಂದಾಯದ ಎರಡನೂರು ಪಟ್ಟು. ಒಂದೊಂದು ಎಕರೆಯ ಬೆಲೆ ೫ ರಿಂದ ೧೦, ಸಾವಿರ, ೧೫ ಸಾವಿರ ಆಗಿದೆ. ರೈತ ಮಾಲೀಕನಾಗುತ್ತಿದ್ದಾನೆ, ಆತನಿಗೆ ಆದಾಯ ಬರುತ್ತಿದೆ. ಈ ಹಣವನ್ನು ಭೂ ಒಡೆಯರಿಗೆ ಕೊಡಬೇಕಾಗುತ್ತದೆ ಹತ್ತು ವರ್ಷಗಳಿಂದ ಹಣ ಕೊಟ್ಟಿಲ್ಲ. ಸರ್ಕಾರದ ಸ್ಪಷ್ಟವಾದ ನೀತಿಯನ್ನು ಹೇಳಿದ್ದೇನೆ. ಇದಕ್ಕಿಂತ ಹೆಚ್ಚಿನ ವಿನಾಯಿತಿಯನ್ನು ದೊಡ್ಡ ರೈತರಿಗೆ ಕೊಡಲು ಸಾಧ್ಯವಿಲ್ಲ.

ಶ್ರೀ ಪಟಮಕ್ಕಿ ರತ್ನಾಕರ್.—ಇಲ್ಲಿ ಮೂಲಭೂತವಾಗಿರುವುದು ಏನೆಂದರೆ ಸಣ್ಣ ರೈತರನ್ನು ಸರ್ಕಾರ ಗುರುತಿಸಬೇಕು. ಭೂನ್ಯಾಯ ಮಂಡಳಿಯಲ್ಲಿ ಜಂಟಿ ಖಾತೆ ಬಗ್ಗೆ ತಕರಾರು ಬರುತ್ತದೆ. ಒಂದು ಕುಟುಂಬಕ್ಕೆ ೧೫ ಎಕರೆ ಜಮೀನು ಇರುತ್ತದೆ. ೯–೧೦ ಜನ ಪಾಲುದಾರರು ಇದ್ದರೆ, ಒಬ್ಬರಿಗೆ ಒಂದೋ ಎರಡೋ ಜಕರೆ ಬರುತ್ತದೆ. ಆಷ್ಟೊಂದು ಜನರ ಪಾಲನ್ನು, ಜಂಟಿ ಖಾತೆಯಾಗಿ ಯಜಮಾನರ ಹೆಸರಿನಲ್ಲಿ ಬರೆದುಬಿಡುತ್ತಾರೆ. ಆದ್ದರಿಂದ ಅವರಿಗೆ ಸರ್ಕಾರದಿಂದ ಸಿಗತಕ್ಕ ಸೌಲಭ್ಯ ವಾಗಲೀ, ಬ್ಯಾಂಕಿಗೆ ಹೋಗತಕ್ಕ ಸೌಲಭ್ಯವಾಗಲೀ, ಪರಿಹಾರವಾಗಲೀ, ಸಿಗುವುದಿಲ್ಲ. ಜಂಟಿ ಖಾತೆ ಹಾಕಂವುದರಿಂದ ಹೀಗೆ ಆಗುತ್ತದೆ. ಅದರ ಬದಲು ಅವರನ್ನು ಪ್ರತ್ಯೇಕ ಗೇಣಿದಾರರಾಗಿ ಪರಿಗಣಿಸುವುದಕ್ಕೆ ಸಾಧ್ಯವೇ ಎಂಬುದು ಅವರ ಪ್ರಶ್ನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಹತ್ತು ಎಕರೆಗಿಂತ ಕಡಿಮೆ ಜಮೀನು ಇದ್ದರೂ ಕೂಡ, ಜಂಟಿ ಖಾತೆ ಇದ್ದರೆ ವಿನಾಯಿತಿ ಸಿಗುವುದಿಲ್ಲ ಎಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಅದನ್ನು ಆಲೋಚನೆ ಮಾಡೋಣ.

ಉಪಾಧ್ಯಕ್ಷರು.—ಹಿರಿಯರೇ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಬರುತ್ತದೆ.

ಕಲಘಟಗಿ ತಾಲ್ಲೂಕಿನಲ್ಲಿ ಅಂಗನವಾಡಿ ಪ್ರಾರಂಭಿಸುವ ಕುರಿತು.

೫೩೮. ಶ್ರೀ ಪಿ. ಸಿ. ಸಿದ್ದನಗೌಡ (ಕಲಘಟಗಿ) ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕಲಘಟಗಿ ತಾಲ್ಲೂಕಿನಲ್ಲಿ ಅಂಗನವಾಡಿ ಪ್ರಾರಂಭಿಸುವ ವಿಚಾರ ಸರ್ಕಾರದವರ ಗಮನಕ್ಕೆ ಇದೆಯೇ ?

(ಆ) ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

(ಅ) ಇದೆ.

(ಆ) ಸಮಗ್ರ ಬಾಲವಿಕಾಸ ಯೋಜನೆಯನ್ನು ಹಂತ ಹಂತವಾಗಿ ಒನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ವಿಸ್ತರಿಸಲು ಉದ್ದೇಶಿಸಲಾಗಿದೆ. ಕಲಘಟಗಿ ತಾಲ್ಲೂಕಿನಲ್ಲಿ ಸಹಾ ಈ ಯೋಜನೆಯನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಪಿ. ಸಿ.ಸಿದ್ದನಗೌಡರ್ (ಕಲಘಟಗಿ) —ಕಲಘಟಗಿ ತಾಲ್ಲೂಕಿನಲ್ಲಿ ಅಂಗನವಾಡಿ ಕೇಂದ್ರವನ್ನು ಈ ಸಲವೇ ಪ್ರಾರಂಭಿಸುತ್ತಾರೆಯೇ ? ಈ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ, ವಿದ್ಯಾರ್ಥಿನಿಲಯಗಳನ್ನು ಕಟ್ಟಿರುವುದಿಲ್ಲ. ಮಾನ್ಯ ಸಚಿವರು ಇದರ ಬಗ್ಗೆ ಏನಾದರೂ ಹೇಳಿಕೆ ಕೊಡುತ್ತಾರೆಯೇ ?

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಸದಸ್ಯರು ಇಲ್ಲಿ ಸಮಗ್ರ ಬಾಲವಿಕಾಸ ಯೋಜನೆ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಆದರೆ ಈಗ ಕೇಳುತ್ತಿರುವ ಪ್ರಶ್ನೆಯೇ ಬೇರೆ. ಅವರೂ ಕೂಡ ಸದಸ್ಯರು ತಿಳಿಸಿರುವ ವಿಚಾರವನ್ನು ಪರಿಶೀಲಿಸಲಾಗುವುದು.

ಅಂತರಜಾತಿ ವಿವಾಹಗಳಿಗೆ ಪ್ರೋತ್ಸಾಹ ಧನ ನೀಡುವ ಬಗ್ಗೆ.

೫೬೯ (೧) ಶ್ರೀ ಎಂ. ಶಿವಣ್ಣ (ಹೆಗ್ಗಡದೇವನ ಕೋಟೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧೯೮೩ ರಿಂದ ಇನ್ನುವರೆಗೂ ಎಷ್ಟು ಅಂತರಜಾತಿ ವಿವಾಹ ದಂಪತಿಗಳಿಗೆ ಪ್ರೋತ್ಸಾಹ ಹಾಗೂ ಹಣ ಸೌಲಭ್ಯ ನೀಡಲಾಗಿದೆ. ಈಗ ನೀಡುತ್ತಿರುವ ಹಣವನ್ನು ಹೆಚ್ಚಿಸಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ ? ಹಾಗೂ ಹಣ ಕೊಡುವಾಗ ವಿಳಂಬವಾಗುತ್ತಿರಲು ಕಾರಣವೇನು ?